ತುಂಗಾ ಮೇಲ್ದಂಡೆ ಯೋಜನೆ ಕಾಮಗಾರಿ ಅನುಷ್ಠಾನ

1158(1394) ಶ್ರೀ ಆರಗ ಜ್ಞಾನೇಂದ್ರ ತೀರ್ಥಹಳ್ಳಿ: ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆ ಕಾಮಗಾರಿಯ ಅಂದಾಜು ಮೊತ್ತವೆಷ್ಟು;

ಆ) ಇದುವರೆಗೆ ಬಿಡುಗಡೆಯಾದ ಮೊತ್ತ ಹಾಗು ಖರ್ಚಾದ ಮೊತ್ತವೆಷ್ಟು;

ಇ) ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಈ) ಈ ಯೋಜನೆಯಿಂದ ಎಷ್ಟು ಅರಣ್ಯ ಪ್ರದೇಶ, ಕೃಷಿ ಭೂಮಿ, ಖಾಸಗಿ ಮತ್ತು ಸರ್ಕಾರಿ ಕಟ್ಟಡಗಳು ಮುಳುಗಡೆಯಾಗಲಿದೆ;

ಉ) ಪರಿಹಾರ ಹಾಗೂ ಪುನರ್ವಸತಿಗೆ ಏನು ಕ್ರಮವನ್ನು ಸರ್ಕಾರ ಕೈಗೊಂಡಿದೆ?

ಶ್ರೀ ಎಚ್.ಕೆ. ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)

ಅ) 2000-01 ನೇ ಸಾಲಿನ ದರಪಟ್ಟಿಯಂತೆ ತುಂಗಾ ಮೇಲ್ದಂಡೆ ಯೋಜನೆಯ ಅಂದಾಜು ಮೊತ್ತವು ರೂ. 915.35 ಕೋಟಿಗಳಾಗಿದೆ.

ಆ) 1991-92 ನೇ ಸಾಲಿನಿಂದ 2000-01ರವರೆಗೆ ಸದರಿ ಯೋಜನೆಗೆ ಬಿಡುಗಡೆಯಾದ (ಅನುದಾನ) ಮೊತ್ತ ರೂ. 13696.39 ಲಕ್ಷ ಹಾಗೂ ಖರ್ಚಾದ ಮೊತ್ತ ರೂ. 6856.00 ಲಕ್ಷಗಳು. (ಪ್ರಾರಂಭದಿಂದ ಫೆಬ್ರವರಿ 2001 ರ ಅಂತ್ಯಕ್ಕೆ)

ಇ) ಈ ಯೋಜನೆಯನ್ನು ಮಾರ್ಚ್ 2003 ರ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಈ) ಈ ಯೋಜನೆಯಿಂದ ಮುಳುಗಡೆ ಹೊಂದಲಿರುವ ಅರಣ್ಯ ಪ್ರದೇಶ, ಕೃಷಿ ಭೂಮಿ ಮತ್ತು ಕಟ್ಟಡಗಳ ವಿವರ ಈ ಕೆಳಗಿನಂತಿದೆ.

ಉ) ಮೇಲಿನ 416.5 ಹೆ. ಅರಣ್ಯೇತರ ಪ್ರದೇಶದ ಪೈಕಿ ಕಂದಾಯ ಇಲಾಖೆಯಿಂದ ರೀಗ್ರ್ಯಾಂಟ್ ಮಾಡಲಾದ 110.ಹೆ. ಪ್ರದೇಶಕ್ಕೆ ಪರಿಹಾರ ನೀಡಬೇಕಾಗುವುದು. ರೀಗ್ರ್ಯಾಂಡ್ ಆದ ವಿವರಗಳನ್ನು ಕಂದಾಯ ಇಲಾಖೆಯಿಂದ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

ತೀರ್ಥಹಳ್ಳಿ ತಾ: ಲಿಂಗಾಪುರ ಗ್ರಾಮ (ಮಜರ್ : ಮಂಡಗದ್ದೆ ದ ಮುಳುಗಡೆ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ತೀರ್ಥಹಳ್ಳಿ ತಾ: ಕಣಗಾಲಕೊಪ್ಪ ಗ್ರಾಮದ ಸರ್ವೆ ನಂ. 40 ರಲ್ಲಿ ವಸಾಹತು ನಿರ್ಮಿಸಲು ಉದ್ದೇಶಿಸಲಾಗಿದೆ.

ಪುನರ್ವಸತಿ ಕಾರ್ಯ ಮೇಲುಸ್ತುವಾರಿ ಹಾಗೂ ಸಲಹಾ ಕಾರ್ಯಗಳಿಗಾಗಿ ಪುನರ್ವಸತಿ ಸಲಹಾ ಸಮಿತಿ ಹಾಗೂ ಒಂದು ಉಪಸಮಿತಿಯನ್ನು ರಚಿಸಲು ಉದ್ದೇಶಿಸಲಾಗಿದೆ. ಸಂತ್ರಸ್ತರ ಕಟ್ಟಡಗಳ ಮಾಲ್ಯೀಕರಣ ಕಾರ್ಯವನ್ನು ಜರುಗಿಸಿ ಪರಿಹಾರ ಒದಗಿಸಲು ಒಟು ಹಾಗೂ ಪುನರ್ವಸತಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ರಾಜ್ಯ ವಿಜಾನೆ ಇಲಾಖೆಯಲ್ಲಿ ನಡೆದಿರುವ ಅವ್ಯವಹಾರ